‘ಚಂದಿರನೇತಕೆ ಓಡುವನಮ್ಮ’ ಎಂದು ಅಮ್ಮನನ್ನು ಮಗು ಪ್ರಶ್ನಿಸಿದ್ದು ಪದ್ಯದ ಮಾತು. ನಿಜ ಏನೆಂದರೆ, ಚಂದಿರನ ಹಿಂದೆ ಓಡುತ್ತಿರುವುದು ಮನುಷ್ಯ. ಚಂದ್ರನ ಅಂಗಳಕ್ಕೆ ಗಗನನೌಕೆ ಕಳಿಸಿದ್ದಾಯಿತು, ಮನುಷ್ಯನನ್ನು ಇಳಿಸಿದ್ದಾಯಿತು, ಅಲ್ಲಿಂದ ಕಲ್ಲು–ಮಣ್ಣನ್ನು ಹೊತ್ತು ತಂದಿದ್ದಾಯಿತು. ಇಷ್ಟೆಲ್ಲ ಆದರೂ ಚಂದ್ರನ ಬಗೆಗಿನ ಕುತೂಹಲ ಮಾತ್ರ ಕಡಿಮೆಯಾಗಿಲ್ಲ. ಬರುವ ಜುಲೈ 20ಕ್ಕೆ ಚಂದ್ರನ ಮೇಲೆ ಮನುಷ್ಯ ಮೊದಲ ಬಾರಿಗೆ ಹೆಜ್ಜೆಯಿಟ್ಟು 50 ವರ್ಷ! ಈ ಸುವರ್ಣ ಮಹೋತ್ಸವದ ಆಚರಣೆಗೆ ವಿಶ್ವದ ವಿಜ್ಞಾನಲೋಕವೇ ತುದಿಗಾಲಲ್ಲಿ ನಿಂತಿದೆ. ನಮ್ಮ ಇಸ್ರೋ ‘ಚಂದ್ರಯಾನ–2’ಕ್ಕೆ ಸಿದ್ಧತೆ ನಡೆಸಿದೆ. ಇಲ್ಲಿಯವರೆಗೆ ಮನುಕುಲ ನಡೆಸಿದ ಚಂದ್ರಯಾನ ಪಯಣಗಳ ಅವಲೋಕನದ ಈ ವಿಶೇಷ ಬರಹದ ಮೂಲಕ, ಚಂದ್ರನ ಮೇಲಿನ ‘ಚಿನ್ನದ ಹೆಜ್ಜೆ’ ಹಾಗೂ ಚಂದ್ರಯಾನದ ಯುಗಳ ಸಂಭ್ರಮದಲ್ಲಿ ‘ಸುಧಾ’ ತನ್ನ ಓದುಗರನ್ನೂ ಭಾಗಿಯಾಗಿಸುತ್ತಿದೆ.

■ ಟಿ.ಆರ್. ಅನಂತರಾಮು

# ಚಂದ್ರ ಚುಂಬಕ